# ರೊನಾಲ್ಡೊ ಸೇಲ್!

ರೊನಾಲ್ಡೊ ಎಂಬ ಹೆಸರು ಕೇಳಿದರೆ ಸಾಕು, ಇಡೀ ಕ್ರೀಡಾಂಗಣವೇ ನಡುಗುವಂತೆ ಪ್ರೇಕ್ಷಕರು ಅಬ್ಬರಿಸುತ್ತಾರೆ. 70–80 ಸಾವಿರ ಜನ ತುಂಬುವ ಕ್ರೀಡಾಂಗಣದ ಗ್ಯಾಲರಿಯಲ್ಲಿ ಶಬ್ದಸಮುದ್ರವೇ ಭೋರ್ಗರೆಯುತ್ತದೆ. ಮೈದಾನಕ್ಕಿಳಿಯುವ ರೊನಾಲ್ಡೋನ ಕಾಲುಗಳು ಮಿಂಚಿನ ವೇಗದಲ್ಲಿ ಸಂಚರಿಸುತ್ತವೆ. ದೇಹವನ್ನು ಹಕ್ಕಿಯಂತೆ ಬಾಗಿಸಿ, ಎದುರಾಳಿಗಳ ಕಾಲುಗಳನ್ನು ತಪ್ಪಿಸುತ್ತಾ, ಎಡಬಲಕ್ಕೆ ಚೆಂಡನ್ನು ತಳ್ಳುತ್ತಾ ರೊನಾಲ್ಡೊ ಮುನ್ನುಗ್ಗುವ ಸೌಂದರ್ಯವನ್ನು ಎಷ್ಟು ಕಣ್ಣು ತುಂಬಿಸಿಕೊಂಡರೂ ಪ್ರೇಕ್ಷಕರಿಗೆ ಸಾಲದು. ವೇಗ, ಬುದ್ಧಿವಂತಿಕೆ, ಚೆಂಡನ್ನು ಕಾಲಲ್ಲೇ ತಿರುಗಿಸುವ ಶೈಲಿ ಮತ್ತು ಗೋಲಿನೊಳಕ್ಕೆ ಚೆಂಡನ್ನು ನುಗ್ಗಿಸುವ ಚಾಕಚಕ್ಯತೆ– ಈ ಯಾವುದರಲ್ಲೂ ಇವತ್ತು ಕ್ರಿಶ್ಚಿಯಾನೊ ರೊನಾಲ್ಡೊನನ್ನು ಮೀರಿಸುವ ಇನ್ನೊಬ್ಬ ಫುಟ್‌ಬಾಲ್ ಆಟಗಾರನಿಲ್ಲ.

ಅದಕ್ಕೆಂದೇ ಆತನ ಮೇಲೆ, ಜಗತ್ತಿನ ಅತ್ಯಂತ ಶ್ರೀಮಂತ ಫುಟ್‌ಬಾಲ್ ಕ್ಲಬ್‌ಗಳ ಮ್ಯಾನೇಜರ್‌ಗಳೆಲ್ಲರೂ ಒಂದು ಕಣ್ಣಿಟ್ಟಿರುತ್ತಾರೆ. ಪ್ರತಿ ವರ್ಷವೂ 'ಈ ಸಲ ರೊನಾಲ್ಡೊ ಯಾವ ಕ್ಲಬ್ ಸೇರುತ್ತಾನೆ' ಎಂಬ ಚರ್ಚೆ ನಡೆಯುತ್ತದೆ. 'ಈಗಿರುವ ಕ್ಲಬ್ ಅನ್ನು ಮುಂದಿನ ವಾರ ಬಿಡುತ್ತಾನಂತೆ; ಆತನಿಗೆ ಇಂತಿಷ್ಟು ದಶಲಕ್ಷ ಯೂರೋಗಳ ಆಫರ್ ಹೋಗಿದೆಯಂತೆ' ಎಂದೆಲ್ಲ ಒಂದೇ ಸಮನೆ ಗಾಳಿಸುದ್ದಿಗಳು ಹಬ್ಬುತ್ತವೆ. ಈಗ ಮತ್ತೆ ಅದೇ ರೀತಿಯ ಚರ್ಚೆ ಶುರುವಾಗಿದೆ. ಅಂತರ್ಜಾಲಕ್ಕೆ ಹೋಗಿ 'ಸಾಕರ್' ಎಂದು ಟೈಪಿಸಿದರೆ ಸಾಕು, ರೊನಾಲ್ಡೊ ಸುತ್ತ ಸುದ್ದಿಯ ಮಳೆಯೇ ಸುರಿಯುತ್ತದೆ. ಸದ್ಯಕ್ಕೆ ವಿಶ್ವದ ಅತ್ಯಂತ ಶ್ರೀಮಂತ ಕ್ಲಬ್ ಎನ್ನಿಸಿರುವ ರಿಯಲ್ ಮ್ಯಾಡ್ರಿಡ್ ಪರವಾಗಿ ಆಡುತ್ತಿರುವ ರೊನಾಲ್ಡೊ, ಶೀಘ್ರವೇ ಮ್ಯಾಂಚೆಸ್ಟರ್ ಯುನೈಟೆಡ್ ಅಥವಾ ಪ್ಯಾರಿಸ್ ಸೈಂಟ್ ಗೋಬಿನ್ (ಪಿಎಸ್‌ಜಿ) ಕ್ಲಬ್ ಸೇರಲಿದ್ದಾನೆ ಎಂಬ ಸುದ್ದಿ ಹಬ್ಬಿದೆ. ರಿಯಲ್ ಮ್ಯಾಡ್ರಿಡ್ ಜತೆ ರೊನಾಲ್ಡೊ ಐದು ವರ್ಷಗಳ ಒಪ್ಪಂದ ಮಾಡಿಕೊಂಡದ್ದು 2013ರಲ್ಲಿ. ಅಂದರೆ ಇನ್ನೂ ಮೂರು ವರ್ಷದ ಅವಧಿಯಿದೆ. ಆದರೆ ಪಿಎಸ್‌ಜಿ ಕ್ಲಬ್ ಈತನನ್ನು ಶತಾಯಗತಾಯ ಖರೀದಿಸಲು ಯತ್ನ ನಡೆಸಿದೆ. '728 ದಶಲಕ್ಷ ಯೂರೋ ನೀಡಿ ರೊನಾಲ್ಡೋನನ್ನು ಖರೀದಿಸಲು ಜಿಎಸ್‌ಬಿ ಸಿದ್ಧವಿದೆ. ಈ ಬಗ್ಗೆ ಆರಂಭಿಕ ಮಾತುಕತೆಯೂ ನಡೆದಿದೆ' ಎಂದು ಆ ಕ್ಲಬ್‌ನ ಮ್ಯಾನೇಜರ್ ಹೇಳಿದ್ದಾನೆ. ಕಳೆದ ತಿಂಗಳು ಪತ್ರಿಕಾಗೋಷ್ಠಿಯೊಂದರಲ್ಲಿ 'ನಿಮ್ಮ ಕಾಂಟ್ರಾಕ್ಟ್ ಇನ್ನೂ ಮೂರು ವರ್ಷ ಇದೆಯೆ?' ಎಂದು ಪತ್ರಕರ್ತನೊಬ್ಬ ಪ್ರಶ್ನಿಸಿದಾಗ, ರೊನಾಲ್ಡೊ ಅದಕ್ಕೆ ಉತ್ತರಿಸದೆ, 'ಥ್ಯಾಂಕ್ಯೂ ಮೈ ಡಿಯರ್ ಫ್ರೆಂಡ್' ಎಂದು ಎದ್ದು ಹೊರಟೇಹೋದ! ಅಲ್ಲಿಂದಲೇ ರೊನಾಲ್ಡೊ ಖರೀದಿಯ ಸುದ್ದಿಗೆ ರೆಕ್ಕೆಪುಕ್ಕಗಳು ಬಲಿತು ಹಾರಾಡತೊಡಗಿದೆ.

20ರ ಹರೆಯದಲ್ಲೇ ವಿಶ್ವ ಫುಟ್‌ಬಾಲ್‌ನ ಸೂಪರ್ ಸ್ಟಾರ್ ಆದವನೀತ. ಈಗ ಆತನಿಗೆ 30ರ ಹರೆಯ. ಫುಟ್‌ಬಾಲ್ ಜಗತ್ತಿನ ಸಾರ್ವಕಾಲಿಕ ಸರ್ವಶ್ರೇಷ್ಠ ಆಟಗಾರನಾದ ಬ್ರೆಝಿಲ್‌ನ ಪೀಲೆ ಮತ್ತು ಫುಟ್‌ಬಾಲ್ ಜಗತ್ತಿನ ದಂತಕಥೆಯಾದ ಅರ್ಜೈಂಟಿನಾದ ಡಿಯಾಗೊ ಮೆರಡೋನ ಇಬ್ಬರನ್ನೂ ಮೀರಿಸುವಂತಹ ಖ್ಯಾತಿ ಈಗ ಪೋರ್ಚುಗಲ್‌ನ ರೊನಾಲ್ಡೊ ಬೆನ್ನಿಗೇರಿದೆ. ಸದ್ಯಕ್ಕೆ ಆತನಿಗೆ ಕ್ಲಬ್ ಕೊಡುತ್ತಿರುವ ಹಣ ವರ್ಷಕ್ಕೆ 18.20 ದಶಲಕ್ಷ ಯೂರೋ. ಅದರ ಜತೆಗೆ ಅದರ ದುಪ್ಪಟ್ಟು ಬೋನಸ್ ಹಣ. ಅದಕ್ಕಿಂತ ಹೆಚ್ಚು ಹಣವನ್ನು ಜಾಹೀರಾತುಗಳ ಮೂಲಕ, ತನ್ನದೇ ಆದ ಬ್ರ್ಯಾಂಡ್‌ಗಳ ಮೂಲಕ ಈತ ದುಡಿಯುತ್ತಿದ್ದಾನೆ. ಕಳೆದ ವರ್ಷ ಫೋರ್ಬ್ಸ್ ಪ್ರಕಟಿಸಿದ ಪಟ್ಟಿಯಲ್ಲಿ ಜಗತ್ತಿನ ಅತ್ಯಂತ ಶ್ರೀಮಂತ ಕ್ರೀಡಾಪಟುಗಳ ಪಟ್ಟಿಯಲ್ಲಿ ಈತನಿಗೆ ಎರಡನೇ ಸ್ಥಾನವಿತ್ತು. (ಮೊದಲ ಸ್ಥಾನ ಪಡೆದಾತ ಬಾಕ್ಸಿಂಗ್ ಪಟು ಫ್ಲಾಯ್ಡ್ ಮೇವೆದರ್.) 2014ರಲ್ಲಿ ರೊನಾಲ್ಡೊ ಗಳಿಸಿದ ಒಟ್ಟು ಆದಾಯ 730 ಲಕ್ಷ ಡಾಲರ್!

ಜಗದ್ವಿಖ್ಯಾತ ಕಂಪೆನಿಗಳು ತಮ್ಮ ಬ್ರ್ಯಾಂಡ್ ಅಂಬಾಸಿಡರ್ ಆಗಲು ಪ್ರತಿವರ್ಷವೂ ರೊನಾಲ್ಡೋಗೆ ದುಂಬಾಲು ಬೀಳುತ್ತವೆ. ಅದಕ್ಕಾಗಿ ಕೋಟಿಗಟ್ಟಳೆ ಡಾಲರ್‌ಗಳನ್ನು ವ್ಯಯಿಸಲೂ ಸಿದ್ಧವಿರುತ್ತವೆ. ರೊನಾಲ್ಡೊ ಕೈ ಇಟ್ಟರೆ ಆ ವಸ್ತು ಮಿಂಚಿನ ವೇಗದಲ್ಲಿ ಮಾರಾಟವಾಗುತ್ತದೆ ಎನ್ನುವುದು ಈ ಕಂಪೆನಿಗಳಿಗೆ ಚೆನ್ನಾಗಿ ಗೊತ್ತು. ಹಾಗೆಂದೇ ಈತನ ಜಾಹೀರಾತು ಹೊಂದಿರುವ ಕಂಪೆನಿಗಳ ಪಟ್ಟಿ ಹನುಮಂತನ ಬಾಲದಂತೆ ಬೆಳೆಯುತ್ತಿದೆ. ನೈಕ್, ಟೊಯೊಟಾ, ಹರ್ಬಲೈಫ್, ಎಮಿರೇಟ್ಸ್, ಕ್ಯಾಸ್ಟ್ರೊಲ್, ಸ್ಯಾಮ್‌ಸಂಗ್, ಸಾಕರೇಡ್, ಎಂಪೊರಿಯೊ ಅರ್ಮಾನಿ, ಕೊನಾಮಿ, ಕೆಎಫ್‌ಸಿ– ಹೀಗೆ ಜಗತ್ತಿನ ಬಹುತೇಕ ಕಂಪೆನಿಗಳಿಗೆ ಈತ ಬ್ರ್ಯಾಂಡ್ ರಾಯಭಾರಿ. ಜತೆಗೆ ಸ್ವಂತದ ವಹಿವಾಟು ಬೇರೆ. ಬಟ್ಟೆ, ಶೂ, ಸುಗಂಧದ್ರವ್ಯ, ರಿಯಲ್ ಎಸ್ಟೇಟ್, ನೈಟ್ ಕ್ಲಬ್, ಮೊಬೈಲ್ ಆ್ಯಪ್– ಹೀಗೆ ಆತನದ್ದೇ ಆದ ನೂರೆಂಟು ವಹಿವಾಟುಗಳು.

ರೊನಾಲ್ಡೊ ಸ್ವತಃ ಒಂದು ಜಾಗತಿಕ ಬ್ರ್ಯಾಂಡ್ ಆಗಿ ಬೆಳೆದಿರುವುದು ಒಂದು ಸೋಜಿಗವೇ. ಪೀಲೆ ಮತ್ತು ಮರಡೋನ ಕಾಲದಲ್ಲಿ ಆಟಗಾರರಿಗೆ ಇಷ್ಟೊಂದು ವ್ಯಾಪಾರದ ಅವಕಾಶಗಳಿರಲಿಲ್ಲ. ಈಗ ಕಾಲ ಬದಲಾಗಿದೆ. ರೊನಾಲ್ಡೋನನ್ನು ನೋಡಿದರೆ ಆತನ ಎದುರು ಹಾಲಿವುಡ್‌ನ ಟಾಪ್ ಹೀರೋಗಳ ಜನಪ್ರಿಯತೆ ಕೂಡಾ ಏನೇನೂ ಅಲ್ಲ. ಅದಕ್ಕೆಂದೇ ಆತ ಮಾಧ್ಯಮಗಳ ಕಣ್ಮಣಿ. ಆತನ ಬಗ್ಗೆ ಬರೆದದ್ದನ್ನು ಜಗತ್ತಿನಾದ್ಯಂತ ಜನ ಮುಗಿಬಿದ್ದು ಓದುತ್ತಾರೆ.



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65